ಕನ್ನಡ ಜಾನಪದ ಅಧ್ಯಯನ

ಮೊದಲ ಘಟ್ಟ 1800-1950

■ ಡಾ. ವಿಶ್ವನಾಥ ಬದಿಕಾನ

ಡಾ. ವಿಶ್ವನಾಥ ಬದಿಕಾನ

"ಡಾ. ಶ್ರೀನಿವಾಸ ಹಾವನೂರರು `ಹೊಸಗನ್ನಡ ಅರುಣೋದಯ'(1974) ಸಂಶೋಧನಾ ಗ್ರಂಥದಲ್ಲಿ ಅಸಾಮಾನ್ಯ ಮಾಹಿತಿಗಳನ್ನು ಒದಗಿಸಿಕೊಟ್ಟರು. ಜಾನಪದ ಅಧ್ಯಯನಗಳ  ಕುರಿತು ಆ ಬಗೆಯ ಸಂಶೋಧನೆಗಳು ನಡೆಯಲೇ ಇಲ್ಲ. 1974ರಲ್ಲಿ ಡಾ. ಹಾ.ಮಾ.ನಾಯಕರು 'ಜಾನಪದ ಗ್ರಂಥ ಸೂಚಿ' ಪ್ರಕಟಿಸಿದರು, 1981ರಲ್ಲಿ ಡಾ. ನಂ. ತಪಸ್ವೀಕುಮಾರ್  `ಕನ್ನಡ ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ' ಬರೆದರು. ಡಾ. ವಿಶ್ವನಾಥ ಬದಿಕಾನರು 'ಜಾನಪದ ಗ್ರಂಥಸೂಚಿ'ಯಲ್ಲಿ ಸೇರದೇ ಇರುವ ಕೃತಿಗಳನ್ನು ಪತ್ತೆ ಹಚ್ಚಿ ಅವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ ಗ್ರಂಥಸೂಚಿಯನ್ನು ವಿಸ್ತರಿಸಿದ್ದಾರೆ. ಮೊದಲ ಘಟ್ಟದ ಅಧ್ಯಯನದ ವ್ಯಾಪ್ತಿಯನ್ನು ಲೆಫ್ಟಿನಂಟ್ ಕರ್ನಲ್ ಮೆಕೆಂಜಿ(1796)ಯಿಂದ ಆರಂಭಿಸಿ, 1955ಕ್ಕೆ ಕೊನೆಗೊಳಿಸಿ ಸುಮಾರು 150 ವರ್ಷಗಳ ಜಾನಪದ ಅಧ್ಯಯನವನ್ನು ಈ ಕೃತಿಯಲ್ಲಿ ಪರಿಶೀಲಿಸಿದ್ದಾರೆ. 1800-1947ರ ನಡುವಣ ಅವಧಿಯು ನಾಡು ತೀವ್ರಗತಿಯಲ್ಲಿ ವಸಾಹತೀಕರಣಕ್ಕೆ ಒಳಪಟ್ಟ ಕಾಲವಾಗಿದೆ. ಹಾಗೂ ಈ ಕಾರಣಕ್ಕೆ ರಾಷ್ಟ್ರೀಯ ಹೋರಾಟ ಹುಟ್ಟಿಕೊಂಡು ಜನರು ಸಾಂಸ್ಕೃತಿಕ ಅನನ್ಯತೆಯ ಹುಡುಕಾಟಕ್ಕೆ ತೊಡಗಿದ ಸಂದರ್ಭವಾಗಿದೆ. ಚಾರಿತ್ರಿಕ ಸಂದರ್ಭವು ಜಾನಪದ ಸಂಗ್ರಹ ಅಧ್ಯಯನಗಳ ಮೇಲೆ ನಿರ್ಣಾಯಕವಾದ ಪರಿಣಾಮವನ್ನು ಬೀರಿರಲೇಬೇಕು ಎಂಬ ಪ್ರಮೇಯವನ್ನು ಆಧರಿಸಿ, ಮೊದಲಘಟ್ಟದ ಜಾನಪದ ಸಂಗ್ರಹಗಳು ಕನ್ನಡ ನವೋದಯದ ನೈತಿಕತೆಗೆ ಬದ್ಧವಾಗಿ, ವಸಾಹತೀಕರಣಕ್ಕೆ ಒಳಗಾಗುತ್ತಲೇ ಅದಕ್ಕೆ ತಮ್ಮ ವಿರೋಧವನ್ನು ಸೂಚಿಸಿದ ಬಗ್ಗೆ, ವಿಸ್ತಾರವಾದ ಓದು, ಕಠಿಣವಾದ ಕ್ಷೇತ್ರಕಾರ್ಯ ಮತ್ತು ಪ್ರಖರವಾದ ವಿಶ್ಲೇಷಣೆಗಳಿಂದೊಡಗೂಡಿದ ಈ ಗ್ರಂಥವನ್ನು ರಚಿಸಿದ ಡಾ. ವಿಶ್ವನಾಥ ಬದಿಕಾನರಿಗೆ ಅಭಿನಂದನೆಗಳು. ಜಾನಪದ ಅಧ್ಯಯನಕಾರರೆಲ್ಲರೂ ಓದಬೇಕಾದ ಮಹತ್ವದ ಕೃತಿಯಿದು."

ಡಾ. ಪುರುಷೋತ್ತಮ ಬಿಳಿಮಲೆ

ISBN No: 978-93-342-0710-1

ಕನ್ನಡ ಜಾನಪದ ಅಧ್ಯಯನ ಮೊದಲ ಘಟ್ಟ 1800-1950 ■ ಡಾ. ವಿಶ್ವನಾಥ ಬದಿಕಾನ